ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ.ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ : 666

ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು.

ಉತ್ತರಿಸಬೇಕಾದ ದಿನಾಂಕ : 25.09.2020

ಕ್ರಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ದೇವದಾಸಿ ಪುನರ್ವಸತಿ ಯೋಜನೆಯ ಅನ್ವಯ ಕೈಗೊಂಡ ಕಾರ್ಯಕ್ರಮಗಳೇನು: ಕಳೆದ 5 ವರ್ಷಗಳಲ್ಲಿ ಎಷ್ಟು ದೇವದಾಸಿಯರಿಗೆ ಪುನರ್ವಸತಿ ಕಲ್ಪಿಸಲಾಗಿದೆ; ದೇವದಾಸಿಯರ ಜೀವನೋಪಾಯಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಬಾಗಲಕೋಟೆ, ವಿಜಯಪುರ, ಕಲಬುರಗಿ, ಯಾದಗಿರಿ, ಬಳ್ಳಾರಿ, ಕೊಪ್ಪಳ, ರಾಯಚೂರು, ಶಿವಮೊಗ್ಗ, ಚಿತ್ರದುರ್ಗ ದಾವಣಗೆರೆ ಜಿಲ್ಲೆಗಳಲ್ಲಿ ದೇವದಾಸಿ ಪುನರ್ವಸತಿ ಯೋಜನೆಯಡಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1. ಮಾಜಿ ದೇವದಾಸಿ ಪುನರ್ವಸತಿ ಯೋಜನೆ 2. ಮಾಜಿ ದೇವದಾಸಿಯರ ಮಾಸಾಶನ ಯೋಜನೆ 3. ಮಾಜಿ ದೇವದಾಸಿಯರ ವಸತಿ ಯೋಜನೆ. ಮಾಜಿ ದೇವದಾಸಿ ಮಹಿಳೆಯರ ಜೀವನೋಪಾಯಕ್ಕಾಗಿ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ರೂ.50,000/- (ರೂ.25,000/- ಗಳ ಪ್ರೋತ್ಸಾಹಧನ ಮತ್ತು ರೂ.25,000/- ಸಾಲ) ಗಳ ಆರ್ಥಿಕ ಸೌಲಭ್ಯವನ್ನು ಮತ್ತು ಉದ್ಯಮಶೀಲತಾ ಅಭಿವೃದ್ಧಿ ತರಬೇತಿ (ಇ.ಡಿ.ಪಿ) ಯನ್ನು ನೀಡಿ, ಒದಗಿಸಲಾಗುತ್ತಿದೆ. ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ಸಲ್ಲಿಸಿದೆ
(ಆ)	ಪ್ರಸ್ತುತ ರಾಜ್ಯದಲ್ಲಿರುವ ಮಾಜಿ ದೇವದಾಸಿಯರ ಸಂಖ್ಯೆ ಎಷ್ಟು; ದೇವದಾಸಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಕೈಗೊಂಡ ಕ್ರಮಗಳೇನು;	1993-94 ಮತ್ತು 2007-08ನೇ ಸಾಲುಗಳಲ್ಲಿ ಸರ್ಕಾರದಿಂದ ನಡೆಸಲಾದ ಸಮೀಕ್ಷೆಯಲ್ಲಿ ಮೇಲ್ಕಂಡ 14 ಜಿಲ್ಲೆಗಳ ಒಟ್ಟು 46,660 ಮಾಜಿ ದೇವದಾಸಿಯರಲ್ಲಿ 9,239 ಜನ ಮರಣ ಹೊಂದಿದ್ದು, ಪ್ರಸ್ತುತ 37421 ಮಾಜಿ ದೇವದಾಸಿಯರು ಇರುತ್ತಾರೆ. ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ-1982 ಜಾರಿಯಲ್ಲಿದ್ದು, 2009 ರಲ್ಲಿ ತಿದ್ದುಪಡಿಯಾಗಿ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕ-2009 ರಡಿ ದೇವದಾಸಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

		ದೇವದಾಸಿ ಪುನರ್ವಸತಿ ಯೋಜನೆಯಡಿ ದೇವದಾಸಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು 14 ಜಿಲ್ಲೆಗಳಲ್ಲಿ ಜನಜಾಗೃತಿ ಮೂಡಿಸಲು ಬೀದಿನಾಟಕ, ಬಿತ್ತಿಪತ್ರ, ಕರಪತ್ರ ಮತ್ತು ಗೋಡೆಬರಹದ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಜಾತ್ರೆಗಳಲ್ಲಿ ಮುತ್ತು ಕಟ್ಟುವುದನ್ನು ತಡೆಗಟ್ಟಲು ಜಾತ್ರಾ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ದೇವದಾಸಿ ಪದ್ಧತಿಯ ದುಷ್ಪರಿಣಾಮಗಳ ಬಗ್ಗೆ ಹಾಗೂ ಈ ಪದ್ಧತಿಯನ್ನು ಆಚರಣೆಗೆ ತಂದಲ್ಲಿ ಅದಕ್ಕೆ ವಿಧಿಸಬಹುದಾದ ಶಿಕ್ಷೆಗಳ ಹಾಗೂ ಇನ್ನಿತರೆ ನಿಯಮಗಳ ಬಗ್ಗೆ ಕಾನೂನು ಶಿಬಿರಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಆರೋಗ್ಯ ಶಿಬಿರಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಕೈಗೊಳ್ಳಲಾಗುತ್ತಿದೆ. ಮಾಜಿ ದೇವದಾಸಿಯರ ಸ್ವ ಸಹಾಯ ಸಂಘಗಳನ್ನು ರಚಿಸುವುದರ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.
(ಇ)	ಮಾಜಿ ದೇವದಾಸಿಯರಿಗೆ ವಸತಿ ಯೋಜನೆಯ ಅನ್ವಯ ಇದುವರೆಗೂ ಎಷ್ಟು ಮನೆಗಳನ್ನು ವಿತರಿಸಲಾಗಿದೆ; ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ: (ಜಿಲ್ಲಾವಾರು ವಿವರ ನೀಡುವುದು)	ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಯೋಜನೆಯಡಿ ನಿವೇಶನ ಹೊಂದಿದ ಮಾಜಿ ದೇವದಾಸಿಯರಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ 13252 ಮನೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆ. ಜಿಲ್ಲಾವಾರು ವಿವರವನ್ನು ಅನುಬಂಧ-2 ರಲ್ಲಿ ಸಲ್ಲಿಸಿದೆ.
(ಈ)	ಮಾಜಿ ದೇವದಾಸಿಯರಿಗೆ ಕನಿಷ್ಠ ರೂ.5000/- ಮಾಸಾಶನ ನೀಡುವ ಕುರಿತು ಸರ್ಕಾರದ ನಿಲುವೇನು;	45 ವರ್ಷ ಮೀರಿದ ಮಾಜಿ ದೇವದಾಸಿ ಮಹಿಳೆಯರಿಗೆ 2007 ರಿಂದ ಮಾಸಾಶನವನ್ನು ಒದಗಿಸಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಮಮಅ 57 ಮಅನಿ 2006, ದಿನಾಂಕ:07.08.2007 ರಂತೆ ಮಾಜಿ ದೇವದಾಸಿ ಮಹಿಳೆಯರಿಗೆ ರೂ.400/- ಗಳಂತೆ ಮಾಸಾಶನವನ್ನು ನೀಡಲಾಗುತ್ತಿತ್ತು. ಸರ್ಕಾರದ ಆದೇಶ ಸಂಖ್ಯೆ: ಮಮಅ 20 ಮಅನಿ 2013, ದಿನಾಂಕ:02.09.2013 ರಂತೆ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನವನ್ನು ರೂ.400/- ರಿಂದ ರೂ.500/- ಗಳಿಗೆ ಹೆಚ್ಚಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಮಮಅ 07 ಮಅನಿ 2015, ದಿನಾಂಕ:26.06.2015 ರಂತೆ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನವನ್ನು ರೂ.500/- ರಿಂದ ರೂ.1000/- ಗಳಿಗೆ ಹೆಚ್ಚಿಸಲಾಗಿದೆ.

		ರೂ.500/- ರಿಂದ ರೂ.1000/- ಗಳಿಗೆ ಹೆಚ್ಚಿಸಲಾ[illegible]. ಸರ್ಕಾರದ ಆದೇಶ ಸಂಖ್ಯೆ: ಮಮಇ 44 ಮಅನಿ 2016, ದಿನಾಂಕ:09.02.2017 ರಂತೆ ಮಾಜಿ ದೇವದಾಸಿ ಮಹಿಳೆಯರಿಗೆ ಮಾಸಾಶನವನ್ನು ರೂ.1000/- ರಿಂದ ರೂ.1500/- ಗಳಿಗೆ ಹೆಚ್ಚಿಸಿ, ಆದೇಶಿಸಲಾಗಿರುತ್ತದೆ. ಪ್ರಸ್ತುತವಾಗಿ ರೂ.1500/-ಗಳಂತೆ ಮಾಸಾಶನವನ್ನು ಒದಗಿಸಲಾಗುತ್ತಿದೆ. ಮಾಜಿ ದೇವದಾಸಿಯರಿಗೆ ಮಾಸಾಶನವನ್ನು ರೂ.1500/-ಗಳಿಂದ ರೂ.2000/-ಗಳಿಗೆ ಹೆಚ್ಚಿ[illegible] ಪ್ರಸ್ತಾವನೆ ಸರ್ಕಾರದ [illegible].

ಸಂಖ್ಯೆ : WDCSEC-WDC/56 /2020

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಅನುಬಂಧ-1

ಮಾಜಿ ದೇವದಾಸಿ ಮಹಿಳೆಯರ ಜೀವನೋಪಾಯಕ್ಕಾಗಿ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ಆರ್ಥಿಕ ಸೌಲಭ್ಯವನ್ನು ಒದಗಿಸಿದ ಜಿಲ್ಲಾವಾರು ವಿವರ

ಕ್ರಸಂ	ಜಿಲ್ಲೆಗಳ ಹೆಸರು	2015-16 ರಿಂದ 2019-20ನೇ ಸಾಲಿನವರೆಗೆ ಆರ್ಥಿಕ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ
1	ಬೆಳಗಾವಿ	551
2	ಬಾಗಲಕೋಟೆ	1721
3	ವಿಜಯಪುರ	656
4	ಹಾವೇರಿ	167
5	ಧಾರವಾಡ	148
6	ಗದಗ	220
7	ಚಿತ್ರದುರ್ಗ	73
8	ದಾವಣಗೆರೆ	578
9	ಶಿವಮೊಗ್ಗ	05
10	ರಾಯಚೂರು	544
11	ಕೊಪ್ಪಳ	894
12	ಬಳ್ಳಾರಿ	3503
13	ಕಲಬುರಗಿ	460
14	ಯಾದಗಿರಿ	365

ಅನುಬಂಧ-2

ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಯೋಜನೆಯಡಿ ನಿವೇಶನ ಹೊಂದಿದ ಮಾಜಿ ದೇವದಾಸಿಯರಿಗೆ ಕ.ರಾ.ಮ.ಅ.ನಿಗಮದ ವತಿಯಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ಮನೆ ನಿರ್ಮಾಣದ ಜಿಲ್ಲಾವಾರು ವಿವರ

ಕ್ರ.ಸಂ	ಜಿಲ್ಲೆಗಳ ಹೆಸರು	ವಸತಿ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ
1	ಬೆಳಗಾವಿ	642
2	ಬಾಗಲಕೋಟೆ	2932
3	ವಿಜಯಪುರ	1604
4	ಹಾವೇರಿ	260
5	ಧಾರವಾಡ	281
6	ಗದಗ	546
7	ಚಿತ್ರದುರ್ಗ	62
8	ದಾವಣಗೆರೆ	64
9	ಶಿವಮೊಗ್ಗ	04
10	ರಾಯಚೂರು	1869
11	ಕೊಪ್ಪಳ	1812
12	ಬಳ್ಳಾರಿ	1713
13	ಕಲಬುರಗಿ	624
14	ಯಾದಗಿರಿ	839
	ಒಟ್ಟು	**13252**